## ಶತಮಾನದ ನಮನ

# ಗಂಗಾಧರ ಚಿತ್ತಾಲ

## ಓದಿಗೆ ಔಷಧೀಯ ಶಕ್ತಿ ನೀಡಿದ ಕವಿ



**ಎಚ್. ಎಸ್. ರಾಘವೇಂದ್ರ ರಾವ್**

ವಿಮರ್ಶೆಯ ನೆರವಿಲ್ಲದೆಯೂ ನಮ್ಮ ಮನ ಮುಟ್ಟುವ ಕವಿಗಳಲ್ಲಿ ಗಂಗಾಧರ ಚಿತ್ತಾಲರೂ ಒಬ್ಬರು. ವ್ಯಾಧಿಯಿಂದ ಅಕಾಲಮೃತ್ಯುವಿಗೆ ತುತ್ತಾದ ಅವರ ಹುಟ್ಟಲಿದ್ದ ಕಾವ್ಯದಲ್ಲಿ ಮಾನುಷಿಕ ಮತ್ತು ಸಾಮಾಜಿಕಗಳ ಅರ್ಥಪೂರ್ಣ ಸಂಯೋಜನೆ ಆಗುತ್ತಿತ್ತೇನೋ ಎಂಬ ಊಹೆಯ ನಡುವೆಯೂ, ಚಿತ್ತಾಲರು ನಮಗೆ ಕೊಟ್ಟಿರುವುದು ಅನನ್ಯವಾಗಿದೆ, ಘನವಾಗಿದೆ.

**‘ಹುಡುಕಿದರೂ ಸಿಗಲಾರ ಇವನಂಥ ಇನ್ನೊಬ್ಬ!’**
**–ಯಶವಂತ ಚಿತ್ತಾಲ**

1

ನಮ್ಮದು, ಕವಿತೆಯನ್ನು ಕೇಳುವ/ಓದುವ ಬಗೆಗಳನ್ನು ಕಳೆದುಕೊಳ್ಳುತ್ತಿರುವ ಕಾಲ. ಇದಕ್ಕೆ ಹಲವು ಕಾರಣಗಳಿವೆ. ಕವಿತೆಯನ್ನು ವಿಮರ್ಶೆ ಮಾಡುವ, ಪಾಠ ಮಾಡುವ ಹೊಣೆಯನ್ನು ಹೊತ್ತಿರುವ ನನ್ನಂಥ ಹಲವರೂ ಅಂತಹ ಒಂದು ಕಾರಣ. ‘ಕವಿತೆ ಎಂದರೇನು?’ ಎಂಬ ಪ್ರಶ್ನೆಗೆ ತಾವು ಕೊಟ್ಟುಕೊಳ್ಳುವ ಉತ್ತರಗಳೇ ಸರಿಯೆಂದು ನಂಬಿದ ನಮ್ಮ ಹಿರಿಯರು, ಪ್ರತಿಮೆ, ಸಂಕೇತ, ಪ್ರತೀಕ, ಧ್ವನಿ, ವ್ಯಂಗ್ಯಗಳ ಬಳಕೆಯಿಲ್ಲದ ಕವಿತೆ ಕವಿತೆಯೇ ಅಲ್ಲವೆಂದು ಹಟ ಹಿಡಿದರು. ‘ನೇರವಾದ ಸರಳ ಕಥನ’ವನ್ನು ಬಳಸಿದ ಹಲವು ಕವಿಗಳನ್ನು ಸುಮ್ಮನೆ ಬದಿಗೆ ಸರಿಸಿದರು. ಇನ್ನೊಂದು ಕಡೆ ಅನುಭಾವ, ಅಧ್ಯಾತ್ಮಗಳ ಮೈತ್ರಿಯಿಲ್ಲದ ಸಾಹಿತ್ಯವು ಏನನ್ನೋ ಕಳೆದುಕೊಳ್ಳುತ್ತದೆ ಎಂಬ ಭ್ರಮೆಯನ್ನು ಹುಟ್ಟು ಹಾಕಲಾಯಿತು. ಇದರ ಜೊತೆಗೆ ‘ಪ್ರಸಿದ್ಧರಾದ’ ಕೆಲವರ ಆರಾಧನೆಯಲ್ಲಿ ಮಗ್ನರಾಗಿ ಉಳಿದವರನ್ನು ಮರೆಯುವುದು ಕನ್ನಡ ಸಂಸ್ಕೃತಿಯ ಸಾಮಾನ್ಯ ಲಕ್ಷಣ. ಇಷ್ಟೇ ಮುಖ್ಯವಾಗಿ, ನಮ್ಮ ಜೀವನಶೈಲಿಯನ್ನೇ ಆವರಿಸಿಕೊಂಡಿರುವ ‘ಆತುರ’ವು ಕವಿತೆಯ ಓದಿಗೆ ಬೇಕಾದ ಒಳ ಚಲನೆ ಮತ್ತು ಭಾಷೆಯ ಸೂಕ್ಷ್ಮಗಳ ಕಡೆ ಗಮನ ಹರಿಸಲು ಬೇಕಾದ ವ್ಯವಧಾನವು